**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ**

**ಸಿ ಸಿ ಸಂಖ್ಯೆ: 37/2025**

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ. ನರಸೀಪುರ ಆದ ನಾನು

1. ರಮೇಶ ಬಿನ್ ಲೇ ನಂಜಯ್ಯ
   41 ವರ್ಷ.

2. ಮರಿಜೋಗಿ ಬಿನ್ ಲೇ ನಂಜಯ್ಯ
   52 ವರ್ಷ.

3. ಶಂಕರ ಬಿನ್ ನಾಗರಾಜಪ್ಪ
   48 ವರ್ಷ.

4. ಶಿವಮಲ್ಲು ಬಿನ್ ಮಲ್ಲಯ್ಯ
   45 ವರ್ಷ.

5. ರವಿ ಬಿನ್ ಬಸವರಾಜಯ್ಯ
   37 ವರ್ಷ.

6. ಚೆನ್ನಸ್ವಾಮಿ ಬಿನ್ ಬಸವರಾಜಯ್ಯ
   37 ವರ್ಷ.

7. ಬಂಗಾರಸ್ವಾಮಿ ಬಿನ್ ನಂಜುಂಡಯ್ಯ
   37 ವರ್ಷ.

8. ದಿಲೀಪ್ ಜಿ ಬಿನ್ ಗಣೇಶ
23 ವರ್ಷ.

9. ಅಭೀಷೇಕ್ ಆರ್ ಬಿನ್ ರಮೇಶ
26 ವರ್ಷ.

10. ಕಿರಣ್ ಬಿನ್ ಮಹದೇವ
30 ವರ್ಷ.

ಎಲ್ಲರ ವಾಸಃ ಬೂದಹಳ್ಳಿ ಗ್ರಾಮ,
ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಎನೆಂದರೆ :-

ಮೊದಲನೆಯದಾಗಿ, ದಿನಾಂಕ 11.08.2024 ರಂದು ಸಂಜೆ 5.00 ಗಂಟೆ ಸಮಯದಲ್ಲಿ, ತಿ. ನರಸೀಪುರ ಪೋಲಿಸ್ ಠಾಣಾ ಸರಹದ್ದಿನ ತಿ. ನರಸೀಪುರ ತಾಲ್ಲೂಕಿನ ಬೂದಹಳ್ಳಿ ಗ್ರಾಮದ ಚಾಸಾ-1/ಮಹಮದ್ ಜಬೀವುಲ್ಲಾ ರವರ ತೋಟದ ಮನೆಯ ಮುಂಭಾಗ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ, ಅಕ್ರಮ ಕೂಟ ಮಾಡಿಕೊಂಡು ಅದರ ಸದಸ್ಯರಾಗುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 189(2) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ, ನಿಮ್ಮ ಏಕೋದ್ದೇಶದ ಸಾಧನೆಗಾಗಿ,

ದೊಂಬಿ ಗಲಾಟೆ ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 191(2) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ, ನಿಮ್ಮ ಏಕೋದ್ದೇಶದ ಸಾಧನೆಗಾಗಿ, ಮಾರಕ ಆಯುಧವಾದ ಕಲ್ಲನ್ನು ಹಿಡಿದು ದೊಂಬಿ ಗಲಾಟೆ ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 191(3) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ, ನಿಮ್ಮ ಏಕೋದ್ದೇಶದ ಸಾಧನೆಗಾಗಿ, ಚಾಸಾ-1 ರವರನ್ನು ಉದ್ದೇಶಿಸಿ "ಲೇ ಸಾಬಿ, ಬೋಳಿ ಮಗನೆ, ಸೂಳೇ ಮಗನೆ" ಎಂಬ ಅವ್ಯಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 352 ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಐದನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ, ನಿಮ್ಮ ಏಕೋದ್ದೇಶದ ಸಾಧನೆಗಾಗಿ, 1ನೇ ಆರೋಪಿಯಾದ ನೀವು ನಿಮ್ಮ ಕೈಯಿಂದ ಚಾಸಾ-1 ಕಪಾಲಕ್ಕೆ ಹೊಡೆದು, ಅವರಿಗೆ

ನೋವುಂಟು ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 115(2) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಆರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ, ನಿಮ್ಮ ಏಕೋದ್ದೇಶದ ಸಾಧನೆಗಾಗಿ, 3ನೇ ಆರೋಪಿಯಾದ ನೀವು ಕಲ್ಲಿನಿಂದ ಚಾಸಾ-2/ಮಹಮದ್ ಆಯೂಬ್ ರವರ ತಲೆಗೆ ಹೊಡೆದು ಅವರಿಗೆ ಸಾಮಾನ್ಯ ಸ್ವರೂಪದ ಗಾಯವುಂಟು ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 118(1) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಏಳನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ, ನಿಮ್ಮ ಏಕೋದ್ದೇಶದ ಸಾಧನೆಗಾಗಿ, ಚಾಸಾ-1 ಮತ್ತು 2 ರವರಿಗೆ ಪ್ರಾಣ ಬೆದರಿಕೆ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 351(2)(3) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕ 27.09.2025.

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಟಿ ನರಸೀಪುರ**

**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ ನರಸೀಪುರ**

**ಸಿ ಸಿ ಸಂಖ್ಯೆಃ 37/2025**

## ದೋಷಾರೋಪಣೆ

1. ರಮೇಶ ಬಿನ್ ಲೇ ನಂಜಯ್ಯ
   41 ವರ್ಷ.

2. ಮರಿಜೋಗಿ ಬಿನ್ ಲೇ ನಂಜಯ್ಯ
   52 ವರ್ಷ.

3. ಶಂಕರ ಬಿನ್ ನಾಗರಾಜಪ್ಪ
   48 ವರ್ಷ.

4. ಶಿವಮಲ್ಲು ಬಿನ್ ಮಲ್ಲಯ್ಯ
   45 ವರ್ಷ.

5. ರವಿ ಬಿನ್ ಬಸವರಾಜಯ್ಯ
   37 ವರ್ಷ.

6. ಚಿನ್ನಸ್ವಾಮಿ ಬಿನ್ ಬಸವರಾಜಯ್ಯ
   37 ವರ್ಷ.

7. ಬಂಗಾರಸ್ವಾಮಿ ಬಿನ್ ನಂಜುಂಡಯ್ಯ
   37 ವರ್ಷ.

8. ದಿಲೀಪ್ ಜಿ ಬಿನ್ ಗಣೇಶ
   23 ವರ್ಷ.

9. ಅಭೀಷೇಕ್ ಆರ್ ಬಿನ್ ರಮೇಶ
26 ವರ್ಷ.

10. ಕಿರಣ್ ಬಿನ್ ಮಹದೇವ
30 ವರ್ಷ.

ಎಲ್ಲರ ವಾಸಃ ಬೂಹಹಳ್ಳಿ ಗ್ರಾಮ,
ತಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕ 27.09.2025

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಟಿ ನರಸೀಪುರ**